## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2012-13ನೇ ಸಾಲಿಗೆ ರಾಜ್ಯದ ವಿವಿಧ ಜಿಲ್ಲೆ/ತಾಲ್ಲೂಕು/ ಹೋಬಳಿಗಳಲ್ಲಿ ವಾಲ್ಮೀಕಿ ಭವನ ನಿರ್ಮಿಸುವ ಬಗ್ಗೆ.

ಓದಲಾಗಿದೆ:- ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಇವರ ಪತ್ರ ಸಂಖ್ಯೆ:ಪವಕನಿ/ಸಂವಿ/ ಸಿಆರ್ -37/2012-13, ದಿನಾಂಕ:29-09-2012

*****

**ಪ್ರಸ್ತಾವನೆ:-**

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರು ರಾಜ್ಯದ ವಿವಿಧ ಸ್ಥಳಗಳಲ್ಲಿ ಮಹರ್ಷಿ ವಾಲ್ಮೀಕಿ ಭವನಗಳನ್ನು ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಸಕಇ 227 ಪವಯೋ 2012, ಬೆಂಗಳೂರು ದಿನಾಂಕ:21-01-2013**

2012-13ನೇ ಸಾಲಿಗೆ ಈ ಕೆಳಕಂಡ ಸ್ಥಳಗಳಲ್ಲಿ, ವಾಲ್ಮೀಕಿ ಭವನಗಳನ್ನು ನಿರ್ಮಿಸಲು ಸರ್ಕಾರದ ತಾತ್ವಿಕ ಮಂಜೂರಾತಿ ನೀಡಲಾಗಿದೆ.

| ಕ್ರಮ ಸಂಖ್ಯೆ | ಜಿಲ್ಲೆ/ತಾಲ್ಲೂಕು/ಇತರೆ ಸ್ಥಳ | ರೂ.ಲಕ್ಷಗಳಲ್ಲಿ |
|---|---|---|
| 1 | ಬಾದಾಮಿ ತಾಲ್ಲೂಕು ಕೇಂದ್ರ, ಬಾಗಲಕೋಟೆ ಜಿಲ್ಲೆ | 100.00 |
| 2 | ಕುಷ್ಟಗಿ ತಾಲ್ಲೂಕು ಕೇಂದ್ರ, ಕೊಪ್ಪಳ ಜಿಲ್ಲೆ | 100.00 |
| 3 | ಶಿರಹಟ್ಟಿ ತಾಲ್ಲೂಕು ಕೇಂದ್ರ, ಗದಗ ಜಿಲ್ಲೆ | 100.00 |
| 4 | ಗಂಗಾವತಿ ತಾಲ್ಲೂಕು ಕೇಂದ್ರ, ಕೊಪ್ಪಳ ಜಿಲ್ಲೆ | 100.00 |
| 5 | ರೋಣ ತಾಲ್ಲೂಕು ಕೇಂದ್ರ, ಗದಗ ಜಿಲ್ಲೆ | 100.00 |
| 6 | ಹಿರೇಕೆರೂರು ತಾಲ್ಲೂಕು ಕೇಂದ್ರ, ಹಾವೇರಿ ಜಿಲ್ಲೆ | 100.00 |
| 7 | ಚೋರುನೂರು ಹೋಬಳಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ | 50.00 |
| 8 | ಶಿರಾ ತಾಲ್ಲೂಕು ಕೇಂದ್ರ, ತುಮಕೂರು ಜಿಲ್ಲೆ | 100.00 |
| 9 | ಗೌರಿಬಿದನೂರು ತಾಲ್ಲೂಕು ಕೇಂದ್ರ, ಚಿಕ್ಕಬಳ್ಳಾಪುರ ಜಿಲ್ಲೆ | 100.00 |
| 10 | ಪಿರಿಯಾಪಟ್ಟಣ ಟೌನ್, ಮೈಸೂರು ಜಿಲ್ಲೆ | 50.00 |
| 11 | ಅಂಕೋಲ ತಾಲ್ಲೂಕು ಕೇಂದ್ರ, ಉತ್ತರ ಕನ್ನಡ ಜಿಲ್ಲೆ | 100.00 |
| 12 | ಶಿಗ್ಗಾವ್ ತಾಲ್ಲೂಕು ಕೇಂದ್ರ, ಹಾವೇರಿ ಜಿಲ್ಲೆ | 100.00 |
| | **ಒಟ್ಟು** | **11000.00** |

**ಷರತ್ತುಗಳು:-**

(1) ಸರ್ಕಾರಿ ಆದೇಶ ಸಂಖ್ಯೆ ಸಕಇ 180 ಪಕವಿ 2011, ಬೆಂಗಳೂರು ದಿನಾಂಕ 28-09-2011ರ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸತಕ್ಕದ್ದು.

(2) ಶ್ರೀ ಮಹರ್ಷಿ ವಾಲ್ಮೀಕಿ ಭವನ ನಿರ್ಮಿಸಲು ಉದ್ದೇಶಿಸಿರುವ ಸ್ಥಳಕ್ಕೆ ಸಂಬಂಧಿಸಿದ ಗ್ರಾಮ ಪಂಚಾಯಿತಿ: ಪುರಸಭೆ: ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ನಿರ್ದೇಶನ ಪಡೆಯಲು ಕ್ರಮಕೈಗೊಳ್ಳತಕ್ಕದ್ದು.

(3) ಉದ್ದೇಶಿತ ಭವನದ ಕಟ್ಟಡದ ಅಂದಾಜುಗಳ ಪಟ್ಟಿಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ ಪಡೆಯತಕ್ಕದ್ದು.

(4) ಯಾವುದೇ ಭವನದ ನಿರ್ಮಾಣ ವೆಚ್ಚವು ಉಲ್ಲೇಖಿತ ಅಂದಾಜು ವೆಚ್ಚ ಮೀರಿದ್ದಲ್ಲಿ ಅಂತಹ ಮೊತ್ತವನ್ನು ಸ್ಥಳೀಯ ಮೂಲಗಳಿಂದ ಸಂಗ್ರಹಿಸತಕ್ಕದ್ದು.

(5) ಸದರಿ ಭವನಗಳ ನಿರ್ಮಾಣ ಉಸ್ತುವಾರಿಯನ್ನು ಸಂಬಂಧಪಟ್ಟ ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ/ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣ ಅಧಿಕಾರಿ/ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಇವರು ನೋಡಿಕೊಳ್ಳತಕ್ಕದ್ದು.

(6) ಭವನ ನಿರ್ಮಾಣ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (1999) ಹಾಗೂ ಅದರಡಿ ರೂಪಿಸಿರುವ ನಿಯಮಗಳಲ್ಲಿ ನಿಗದಿಗೊಳಿಸಿರುವ "ಕಾರ್ಯವಿಧಾನ" (Procedure) ಪಾಲಿಸತಕ್ಕದ್ದು.

ಈ ಸಂಬಂಧದ ವೆಚ್ಚವನ್ನು 2012-13ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2225-02-283-0-02 (ಯೋಜನೆ) ಅಡಿ ಗಿರಿಜನ ಉಪಯೋಜನೆಗೆ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿ.ರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಮಾಜ ಕಲ್ಯಾಣ ಇಲಾಖೆ

ಗೆ:-

1) ಮಹಾಲೇಖಪಾಲರು (ಎ & ಇ, ಲೆಕ್ಕಪರಿಶೋಧನೆ-1, 2) ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕೃಷಿಭವನ, ಬೆಂಗಳೂರು.
3) ಜಿಲ್ಲಾಧಿಕಾರಿ, ಬಾಗಲಕೋಟೆ/ಕೊಪ್ಪಳ/ಗದಗ/ಹಾವೇರಿ/ಬಳ್ಳಾರಿ/ತುಮಕೂರು/ಚಿಕ್ಕಬಳ್ಳಾಪುರ/ಮೈಸೂರು/ಉತ್ತರ ಕನ್ನಡ.
4) ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಬಾಗಲಕೋಟೆ/ ಕೊಪ್ಪಳ/ ಗದಗ/ ಹಾವೇರಿ/ ಬಳ್ಳಾರಿ/ ತುಮಕೂರು/ ಚಿಕ್ಕಬಳ್ಳಾಪುರ/ ಮೈಸೂರು/ಉತ್ತರ ಕನ್ನಡ.
5) ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ, ಬಾಗಲಕೋಟೆ/ ಕೊಪ್ಪಳ/ ಗದಗ/ ಹಾವೇರಿ/ ಬಳ್ಳಾರಿ/ ತುಮಕೂರು/ ಚಿಕ್ಕಬಳ್ಳಾಪುರ/ಮೈಸೂರು/ಉತ್ತರ ಕನ್ನಡ.
6) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಬಾಗಲಕೋಟೆ/ ಕೊಪ್ಪಳ/ ಗದಗ/ ಹಾವೇರಿ/ ಬಳ್ಳಾರಿ/ ತುಮಕೂರು/ ಚಿಕ್ಕಬಳ್ಳಾಪುರ/ಮೈಸೂರು/ಉತ್ತರ ಕನ್ನಡ.
7) ಶಾಖಾ ರಕ್ಷಾ ಕಡತ.
8) ಹೆಚ್ಚುವರಿ ಪ್ರತಿಗಳು-03

(ನಿರ್ದೇಶಕರು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಇವರ ಮುಖಾಂತರ)